

# ದುರಾಸೆಗೆ ತಕ್ಕ ಫಲ

ಶಶಿಧರ ಹಳೇಮನಿ

ಒಂದು ಊರಿನಲ್ಲಿ ರಂಗವ್ವ ಎಂಬ ಅಜ್ಜಿಯಿದ್ದಳು. ಆಕೆಯ ಹತ್ತಿರ ಒಂದು ಎಮ್ಮೆಯಿತ್ತು, ಎಮ್ಮೆಯ ಹಾಲು ಮಾರಿ ಬಂದ ಹಣದಿಂದ ಜೀವನ ಸಾಗಿಸುತ್ತಿದ್ದಳು. ಹಾಲು ಮಾರಲು ದಿನಾಲೂ ಪಕ್ಕದೂರಿಗೆ ನಡೆದುಕೊಂಡು ಹೋಗುತ್ತಿದ್ದಳು. ಹೋಗುವ ದಾರಿಯಲ್ಲಿ ಒಂದು ಬಾವಿಯಿತ್ತು ಅಲ್ಲಿ ಸ್ವಲ್ಪಹೊತ್ತು ಕುಳಿತುಕೊಂಡು, ಬಾವಿಯಲ್ಲಿ ನೀರು ಕುಡಿದು, ವಿಶ್ರಾಂತಿ ಮಾಡಿ ಮತ್ತೆ ಪ್ರಯಾಣ ಮುಂದುವರೆಸುತ್ತಿದ್ದಳು.

ಹೀಗೆ ಹಾಲು ತೆಗೆದುಕೊಂಡು ಹೋಗೋದು ಬರೋದು ನಡೆದಿತ್ತು. ಆ ದಿನ ಬಾವಿಯ ಹತ್ತಿರ ಕುಳಿತುಕೊಂಡು ವಿಶ್ರಾಂತಿ ತೆಗೆದುಕೊಂಡಳು. ನೀರು ಕುಡಿಯುವಾಗ ಅಜ್ಜಿಗೆ ಒಂದು ದುರಾಲೋಚನೆ ಬಂತು. ಹೇಗೂ ಹಾಲು ಕೊಳ್ಳುವ ಜನರಿಗೆ ನಂಬಿಕೆ ಇದೆ. ಈ ಹಾಲಿಗೆ ಸ್ವಲ್ಪ ನೀರು ಬೆರೆಸಿ ಮಾರಿದ್ರೆ ಹೇಗೆ? ಎಂದು ಯೋಚನೆ ಮಾಡಿದಳು. ಅದೇ ಬಾವಿಯ ಸ್ವಲ್ಪ ನೀರನ್ನು ಬೆರೆಸಿ ಆ ದಿನ ಮಾರಿ ಬಂದಳು. ಅವತ್ತು ಹತ್ತು ರೂಪಾಯಿ ಹೆಚ್ಚು ಹಣ ಬಂತು. ಮರುದಿನ ಇನ್ನೂ ಹೆಚ್ಚು ಬೆರೆಸಿದಳು ಮತ್ತೂ ಹಣ ಬಂತು. ಬರು ಬರುತ್ತಾ ಅರ್ಧಕರ್ಧ ನೀರು ಬೆರೆಸಿ ಮಾರಹತ್ತಿದಳು. ಆ ಊರಲ್ಲಿ ಹಾಲು ಮಾರುವವರು ಯಾರೂ ಇಲ್ಲದ ಕಾರಣ ಜನ ಕೂಡ ಏನೂ ಅನ್ನುತ್ತಿರಲಿಲ್ಲ. ಹೆಚ್ಚು ಸಂಪಾದನೆಯ ಹಣದಿಂದ ಅಜ್ಜಿ, ಒಂದು ದಿನ ಕಿವಿಯೋಲೆ ಖರೀದಿಸಿದಳು. ಇನ್ನೂ ಕಿವಿಗೆ ಹಾಕಿಕೊಂಡಿರಲಿಲ್ಲ, ಅವತ್ತೂ ಹಾಲು ಮಾರಲು ಪಕ್ಕದೂರಿಗೆ ಹೊರಟಳು ಬಾವಿಯ ಬಳಿ ಬುಟ್ಟಿಯಿಟ್ಟು. ನೀರು ಕುಡಿಯಲು ಬಾವಿಯಲ್ಲಿ ಇಳಿದಳು, ಅಕಸ್ಮಾತಾಗಿ ಕೈಯಲ್ಲಿ ಹಿಡಿದ ಹೊಸ ಕಿವಿಯೋಲೆಯೊಂದು ನೀರಲ್ಲಿ ಬಿತ್ತು. ಅಜ್ಜಿಗೆ ಜೀವವೇ ಬಾಯಿಗೆ ಬಂದಂತೆ ಆಯಿತು. ಇಷ್ಟು ದಿನ ಕಷ್ಟಪಟ್ಟು ಗಳಿಸಿದ ಹಣದಲ್ಲಿ ತಂದ ಬಂಗಾರದ ಓಲೆ ನೀರು ಪಾಲಾಯಿತು ಎಂದು ಅಳಹತ್ತಿದಳು. ನೀರಲ್ಲಿ ಇಳಿಯೋಣವೆಂದರೆ ತನಗೆ ಈಜು ಬರೋದಿಲ್ಲ. ಮೆಟ್ಟಿಲು ಹತ್ತಿ ಮೇಲೆ ಬಂದು, ಸುತ್ತಮುತ್ತ ಯಾರಾದ್ರೂ ಇದಾರ ಅಂತ ನೋಡಿದಳು. ದೂರದಲ್ಲಿ ಒಬ್ಬ ದನಕಾಯುವ ಹುಡುಗ ಇದ್ದ, ಕೂಗಿ ಕರೆದಳು. ಈ ಅಜ್ಜಿಗೆ ಏನು ಕಷ್ಟ ಬಂತೋ ಎಂದು ಓಡೋಡಿ ಬಂದ. ಅವನು ಈಕೆಯನ್ನು ಗುರುತಿಸಿದ. ಹಾಲು ಮಾರುವ ಅಜ್ಜಿ, ಅದೂ ಅರ್ಧಕರ್ಧ ನೀರು ಇರುವ ಹಾಲು. 'ಏನಜ್ಜಿ ಯಾಕೆ ಅಳುತ್ತೀ' ಎಂದ. ನನ್ನ ಹೊಸ ಬಂಗಾರದ ಓಲೆ ನೀರಲ್ಲಿ ಬಿದ್ದಿದೆ ಮಗಾ, ಇದರ ಜತಿದೂ ಎಂದು ಕೈಯಲ್ಲಿ ಹಿಡಿದ ಇನ್ನೊಂದು ಓಲೆ ತೋರಿಸಿದಳು. ಹುಡುಗ ನಕ್ಕು, 'ಆ ಓಲೆ ನಿನಗೆ ಸಿಗಲ್ಲ ಅಜ್ಜಿ. ಈ ಬಾವಿ ಬಹಳ ಹಳೆದು. ಒಳಗಡೆ ಬಹಳ ಕೆಸರಿದೆ, ಇಳಿದರೂ ಸಿಗುವುದಿಲ್ಲ. ನೀನು ಏನು ಕೆಲಸ ಮಾಡಿ ಈ ಓಲೆ ಖರೀದಿಸಿದ್ದು' ಎಂದು ಅವನಿಗೆ ಗೊತ್ತಿದ್ದರೂ ಕೇಳಿದ. ನಾನು ಕಷ್ಟಪಟ್ಟು ಎಮ್ಮೆ ಸಾಕಿ ಅದರ ಹಾಲು ಮಾರಿ, ಸಾಲದಕ್ಕೆ ಈ ಬಾವಿ ಹತ್ರ ಬಂದು ನೀರು ಬೆರೆಸಿ ಹೆಚ್ಚು ಹಣ ಸಂಪಾದಿಸಿಕೊಂಡ ಓಲೆ ಮಗಾ ಎಂದಳು ಅಜ್ಜಿ. ದುಡುಕಿನಲ್ಲಿ ಸತ್ಯವೂ ಹೊರಬಂದಿತ್ತು. ಅಜ್ಜಿಗೆ ಸಮಾಧಾನ ಹೇಳಿದ ಹುಡುಗ. 'ನೀನು ಅರ್ಧದಷ್ಟು ನೀರು ಬೆರೆಸಿ ಹಾಲು ಮಾರಿದ್ದೀಯ, ಅದೂ ಈ ಬಾವಿದೇ ಆದ್ದರಿಂದ ನಿನ್ನ ಸಂಪಾದನೆಯ ಅರ್ಧ ಪಾಲು, ಆ ಒಂದು ಓಲೆ ಬಾವಿಗೆ ಸೇರಿತು. ನಿನ್ನ ಸ್ವಾಭಿಮಾನದ ಸಂಪಾದನೆ ನಿನ್ನ ಕೈಯಲ್ಲಿನ ಇನ್ನೊಂದು ಓಲೆ. ಇನ್ನಾದರೂ ಆ ದುರಾಸೆ ಬಿಟ್ಟು ಹಾಲು ಮಾರು ಅಜ್ಜಿ ಎಂದು ಹೇಳಿ' ಹೋದ ಹುಡುಗ. ಅಜ್ಜಿಗೆ ಒಂದು ರೀತಿ ಅವಮಾನ ಅನಿಸಿತು. ಇನ್ನು ಮುಂದೆ ಹಾಲಿನಲ್ಲಿ ನೀರು ಬೆರೆಸಿ ಮಾರಬಾರದೆಂದುಕೊಂಡಳು. ಬುಟ್ಟಿ ತಲೆ ಮೇಲೆ ಹೊತ್ತುಕೊಂಡು ಊರಕಡೆ ನಡೆದಳು.

(ಅಮ್ಮ ಹೇಳಿದ ಕಥೆ)

■ **ನರಸಿಂಹಾರೆಡ್ಡಿ ಯಂಕಾಮೊಳ**